(ಇ) ಬೆಂಗಳುರು ಸುತ್ತಮುತ್ತಲು ಒತ್ತುವರಿಯಾಗಿದ್ದ ಸರ್ಕಾರಿ ಜಮೀನುಗಳನ್ನು ಖಿಲ್ಲಾಪಡಿಸಿ ಬಡವರಿಗೆ ಮನೆ ಹಂಚಿಕೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ 326–18 ಎಕರೆ ಜಮೀನು ಹಂಚಿಕೆ ಮಾಡಲಾಗಿದೆ.

ಉಳಿದಂತೆ ಕರ್ನಾಟಕ ಗೃಹಮಂಡಳಿಗೆ ನಿವೇಶನಗಳನ್ನು ಮಾಡಿ ಬಡವರಿಗೆ ಹಂಚಲು ಜಮೀನು ಹಂಚಿಕೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

426. ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಿಪ್ಪನ್‌ಪೇಟೆ ಗವಟೂರು ಸರ್ವೆ ನಂ.329ರಲ್ಲಿ 32 ಗುಂಟೆ ಜಾಗ ಯಾವ ದಿನಾಂಕದಂದು ಭೂ ಪರಿವರ್ತನೆಯಾಗಿದೆ;

(ಆ) ತಹಶೀಲ್ದಾರ್ ಅಥವಾ ಉಪ ವಿಭಾಗಾಧಿಕಾರಿಯಿಂದ ಭೂ ಪರಿವರ್ತನೆಯಾದ ಬಗ್ಗೆ ಆದೇಶವಾಗಿದೆಯೇ;

(ಇ) ಹಾಗಿದ್ದಲ್ಲಿ, ಆದೇಶದ ಸಂಖ್ಯೆ ತಿಳಿಸುವುದು.

(ಈ) ಭೂ ಪರಿವರ್ತನೆಯನ್ನು ಯಾವ ಉದ್ದೇಶಕ್ಕಾಗಿ ಮಾಡಲಾಗಿದೆ, ಈ ಬಗ್ಗೆ ಹಕ್ಕು ಬದಲಾವಣೆಯಾಗಿದೆಯೇ;

(ಉ) R.R.5, R.R.6 ಆಕಾರ್‌ಬಂದ್‌ನಲ್ಲಿ ಭೂ ಪರಿವರ್ತನೆಯಾದ ಬಗ್ಗೆ ನಮೂದು ಆಗಿದೆಯೇ;

(ಊ) ಇದಕ್ಕೆ ಲೇಔಟ್ ನಕ್ಷೆ ಮಾಡಲಾಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

(ಅ) ರಿಪ್ಪನ್ ಪೇಟೆ ಗವಟೂರು ಸ.ನಂ. 329ರಲ್ಲಿ ಒಟ್ಟು ವಿಸ್ತೀರ್ಣ 0–32ಗುಂಟೆ ಇದ್ದು, ಈ ಪೈಕಿ 0–16 ಗುಂಟೆ ವಿ.ಪಿ. ಅಲಿನೇಷನ್ ಎಂದು 0–16 ಗುಂಟೆ ಸರ್ಕಾರಿ ಫಡಾ ಎಂದು ಪಹಣಿಯಲ್ಲಿ ನಮೂದಾಗಿದೆ. 0–16 ಗುಂಟೆ ಭೂ ಪರಿವರ್ತನೆಯಾದ ಬಗ್ಗೆ ಆದೇಶವಿರುವುದಿಲ್ಲ.

(ಆ) ಇಲ್ಲ. (ಇ) ಉದ್ಭವಿಸುವುದಿಲ್ಲ.

(ಈ) ಇಲ್ಲ. (ಉ) ಇಲ್ಲ. (ಊ) ಇಲ್ಲ.

581. ಶ್ರೀ ನರಸಿಂಹಸ್ವಾಮಿ. ಜೆ (ದೊಡ್ಡಬಳ್ಳಾಪುರ) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಜಿ.ಎಂ.ಎಫ್.ಮೂಲಕ ಈ ಹಿಂದೆ ಸಾಗುವಳಿ ಮಾಡಲು ಅವಕಾಶ ನೀಡಿದ್ದ ನೂರಾರು ರೈತ ಕುಟುಂಬಗಳು ಈಗಲೂ ಸಹ ಅಂತಹ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದು, ಯಾವುದೇ ಹಕ್ಕುದಾರಿಕೆಯನ್ನು ಹೊಂದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಅಂತಹ ಜಮೀನನ್ನು ರೈತರಿಗೆ ಮಂಜೂರು ಮಾಡಿ ಹಕ್ಕುದಾರಿಕೆ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ಹಾಗೂ ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

(ಅ) ಹೌದು.

(ಆ) ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969 ಜಾರಿಗೆ ಬರುವ ಮುನ್ನ ಸರ್ಕಾರಿ ಜಮೀನನ್ನು ಸಾಗುವಳಿ ಮಾಡಲು ತಾತ್ಕಾಲಿಕವಾಗಿ ರೈತರಿಗೆ ಗುತ್ತಿಗೆ ನೀಡಲು ಅವಕಾಶವಿದ್ದು, ಗುತ್ತಿಗೆ ಆದೇಶದಲ್ಲಿ ವಿಧಿಸಿರುವ ಷರತ್ತುಗಳನ್ನು ಅಂತಹ ರೈತನು ಪೂರೈಸಿದ್ದಲ್ಲಿ ಸದರಿ ಜಮೀನಿಗೆ ಕಿಮ್ಮತ್ತನ್ನು ವಿಧಿಸಿ ಅಂತಹ ಜಮೀನನ್ನು ಆ ರೈತರಿಗೆ ಮಂಜೂರು ಮಾಡಲು ನಿಯಮ 23ರಡಿಯಲ್ಲಿ ಅವಕಾಶವಿದ್ದು ತೊಂದರೆಗಳೇನು ಇರುವುದಿಲ್ಲ.

837. ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಯೋಜನಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಪ್ರಸಕ್ತ ವರ್ಷ ಸರ್ಕಾರ ಬಿ.ಎ.ಡಿ.ಪಿ ಯೋಜನೆಗೆ ನಿಗದಿಪಡಿಸಿರುವ ಹಣವೆಷ್ಟು?

(ಆ) ಡಾ: ಡಿ. ಎಂ. ನಂಜುಂಡಪ್ಪ ವರದಿಯನ್ವಯ ಅತಿ ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚಿನ ಅನುದಾನ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?